ಕಥೆ

# ಪ್ರಕ್ಷುಬ್ಧಗೊಂಡ ಕಡಲು




## ಮೋದೂರು ತೇಜ

ಕಲೆ: ವೆಂಕಟ್ರಮಣ ಭಟ್


ರಾತ್ರಿ ಸುರಿದ ಮಳೆಗೆ ನಿಚ್ಚಳವಾದ ನೀಲಾಕಾಶ ತೊಳೆದಿಟ್ಟ ಕನ್ನಡಿಯಂತೆ ಹೊಳೆಯುತ್ತಿತ್ತು. ಹಾಲಾಪುರದ ಮೂಡಣಕ್ಕಿದ್ದ ಕರಡಿ ಗುಡ್ಡದ ನೆತ್ತಿಮೇಲೆ ಮೂಡಿದ ನೇಸರ, ಶ್ರಾವಣ ಸಂಜೆಯ ಮಳೆಯಲಿ ಜಳಕ ಮಾಡಿ, ನೀರಹನಿಗಳ ಮಡಿಯುಟ್ಟು ನಿಂತ ನಿಸರ್ಗದ ನೆತ್ತಿ ನೇವರಿಸುತ್ತಿದ್ದ. ಊರಿನ ದಕ್ಷಿಣ ದಿಕ್ಕಿಗಿರುವ ಹನುಮಂತರಾಯನ ಗುಡಿ ಮುಂದಿನ ಎಡಭಾಗಕ್ಕೆ ಬೆಳೆದಿದ್ದ ಜುವ್ವೆಮರ ಮತ್ತು ಬೇವಿನ ಮರದ ಬುಡದಲ್ಲಿದ್ದ ನಾಗರ ಕಲ್ಲಿಗೂ ಸೇರಿಸಿ ಮೂರಡಿ ಎತ್ತರದಲ್ಲಿ ಅಡ್ಡಾರವಾಗಿ ಕಟ್ಟಿದ್ದ ಕಟ್ಟೆಮೇಲೆ ಹುಟ್ಟೊ ಸೂರ್ಯನಿಗೆ ಬೆನ್ನು ಮಾಡಿ ಕೂತಿದ್ದ ದೇವಸ್ಥಾನ ಕಮಿಟಿಯ ಅಧ್ಯಕ್ಷ ಎಲೆತೋಟದ ಮಲ್ಲಪ್ಪನಿಗೆ, ಗಡಿಯಾರದ ಮುಳ್ಳು ಯಾಕಿಷ್ಟು ನಿಧಾನಕ್ಕೆ ತಿರುಗುತ್ತಿದೆ ಎನಿಸುತ್ತಿತ್ತು. ನೆಲವೆಲ್ಲ ರಜುಗು ರಜುಗಾಗಿತ್ತು. ಕಟ್ಟೆ ಮೇಲೆ ಅಲ್ಲೆದಲ್ಲೆ ಸಣ್ಣಕುನಿಯಲ್ಲಿ ನಿಂತ ನೀರಿನಲ್ಲಿ ಗುಬ್ಬಚ್ಚಿಗಳು ರೆಕ್ಕೆ ಜಾಡಿಸುತ್ತಾ ಸಿನ್ನಾಟ ಆಡುತ್ತಿದ್ದವು. ಮಲ್ಲಪ್ಪನ ಅಕ್ಕಪಕ್ಕದಲ್ಲಿ ಗ್ರಾಮಪಂಚಾಯ್ತಿಯ ಹಾಲಿ ಮೆಂಬರ್ ಗೋವಿಂದಪ್ಪ ಹಾಗೂ ಆತನ ಹಿಂಬಾಲಕರು ಕುಂತಿದ್ದರು. ಪಂಚಾಯ್ತಿ ಇದ್ದಿದ್ದರಿಂದ ಈ ದಿನ ಹೊತ್ತುಮುಂಚೆ ಬಂದು ಹನುಮಪ್ಪನಿಗೆ ಪೂಜೆ ಮಾಡಿ ಕಟ್ಟೆಮೇಲೆ ಕುಂತಿದ್ದವರಿಗೆ ತೀರ್ಥ ಪ್ರಸಾದ ಕೊಟ್ಟಿದ್ದ ಪೂಜಾರಪ್ಪ, ಊರಿನ ಇತರೆ ಮುಖಂಡರು ಬರುವಿಕೆಯ ದಾರಿಯನ್ನ ಎದುರು ನೋಡುತ್ತಿದ್ದ. 'ಏನೊ ಗೋವಿಂದ, ಬಿಸಿಲು ಬಲಿತರು ಪಂಚಾಯ್ತಿ ಕಡೆ ಜನ ತಲೆನೆ ಹಾಕಿಲ್ಲ. ಆ ಕುಡುಕ್ ನನ್ಮಗ ಕರಿಯಜ್ಜ ರಾತ್ರಿ ಡಂಗೂರ ಸಾರಿದ್ನೊ ಇಲ್ವೊ?' ಮಲ್ಲಪ್ಪ ಅಸಮಾಧಾನದಿಂದ ಕೇಳಿದ. ಆ ಮಾತನ್ನ ಆಗತಾನೆ ಬಂದ ಮಾಜಿ ಮೆಂಬರ್ ವಿರೂಪಾಕ್ಷಪ್ಪ ಕೇಳಿಸಿಕೊಂಡು, 'ನಿನಗಂತು ಮಾಡಾಕೆ ಬಕ್ಡಿ ಇಲ್ಲ. ಮನೆ ಮುರುಕನ ಕೆಲಸ ಮಾಡೋಕೆ ಬಂದು ಕುಕ್ಕಂಡಿದಿಯ. ಎಲ್ರು ನಿನ್ನಂಗೆ ಖಾಲಿ ಇರಬೇಕಲ್ಲ' ಅಂತ ಮನಸಲ್ಲೆ ಬಯ್ದುಕೊಳ್ಳುತ್ತಾ, ಹೊರಗೆ ನಗುಮುಖ ಮಾಡಿಕೊಂಡು, 'ರಾತ್ರಿ ಮಳೆ ಬಂದಿದ್ದರಿಂದ ಅರ್ಧಕ್ಕರ್ಧ ಜನ ಹೊಲಮನೆ ಕೆಲಸಕ್ಕೆ ಹೋಗಿದಾರೆ ಮಲ್ಲಪ್ಪ. ನಿನ್ನ ಸುಖಾನೆ ಎಲ್ರಿಗು ಸಿಗಬೇಕಲ್ಲ?' ಅಂತ ವ್ಯಂಗ್ಯವಾಗಿ ಹೇಳಿದ. ವಿರೂಪಾಕ್ಷಪ್ಪನ ಮಾತಿನ ಒಳಾರ್ಥ ಮಲ್ಲಪ್ಪನಿಗೆ ಮನದಟ್ಟಾಗಿ, 'ಯೋಗಿ ಪಡೆದಿದ್ದು ಯೋಗಿಗೆ, ಜೋಗಿ ಪಡೆದಿದ್ದು ಜೋಗಿಗೆ ಕಣ್ಲಾ ವಿರುಪ. ನನ್ನ ಸುಖ ನಿನಗೆಂಗೆ ಸಿಗತ್ತೈತೆ ಹೇಳು?' ಅಂತೇಳಿ ಪಕ್ಕನೆ ನಕ್ಕ. ಆ ನಗುವಿನ ಕುಹಕತೆಯಲ್ಲಿ ಗೋವಿಂದಪ್ಪನೂ ಪಾಲುದಾರನಾದ. ಇವುನುತಾಗೇನು ಮಾತು ಎಂದುಕೊಂಡ ಮಲ್ಲಪ್ಪ, 'ಈಗ ಕರೆಂಟು ಬಂದಿರಬೇಕು. ಇನ್ನೊಂದ್ಸಲ ಮೈಕಿನಲ್ಲಿ ಅನೌನ್ಸ್ ಮಾಡಿಬಿಡು ಗೋವಿಂದ. ಬಂದೋಸು ಜನ ಬರ್ಲಿ, ಯಾರ್ನೂ ಭಂಗೋಗೋದು ಬ್ಯಾಡ' ಅಂತ ಸ್ವಲ್ಪ ಬೇಸರದ ದನಿಯಲ್ಲಿ ಹೇಳಿದ. ಆಗ ಗೋವಿಂದಪ್ಪ ತನ್ನ ಬಲಗೈಬಂಟ ಶಂಕ್ರನ ಕಡೆ ತಿರುಗಿ ನೋಡಿದ. ಅವನು ಆತನ ಕಣ್ಸನ್ನೆಯನ್ನ ಅರ್ಥ ಮಾಡಿಕೊಂಡು ಗುಡಿಯೊಳಗೆ ಹೋಗಿ ಮೈಕ್ ಆನ್‌ಮಾಡಿ, "ಊರಿನ ಹಿರಿಯರಿಗೆ, ಗೌಡ, ಗೊಂಚಿಕಾರ, ತೋಟಿ, ತಳವಾರನಿಗೆ, ಕುಲವನ್ನೆಲ್ಲು ಜಾತಿ ಜನರಿಗೆ ತಿಳಿಸೋದೇನಂದ್ರೆ, ಈಗ ಗಿಡ್ಡಹನುಮಪ್ಪನ ಮಗ ಮಂಜನ ಪಂಚಾಯ್ತಿ ಐತೆ. ಎಲ್ರು ತಪ್ಪದೆ